IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಜೋಕುಮಾರ ಸ್ವಾಮಿ ನಾಟಕದಲ್ಲಿ ಊಳಿಗಮಾನ್ಯ ಪದ್ಧತಿಯ ಪರಿಕಲ್ಪನೆ

**ಬಾಲರಾಜು ಬಿ ವಿ**

**ಸಹಾಯಕ ಪ್ರಾಧ್ಯಾಪಕರು**

**ಕ್ರೈಸ್ಟ್ ಅಕಾಡಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್**

**ಹುಲ್ಲಹಳ್ಳಿ , ಕೊಪ್ಪ -ಬೇಗೂರ್ ರೋಡ್, ಸಕಲವಾರ ಪೋಸ್ಟ್, ಬೆಂಗಳೂರು**

**ಡಾ. ಹೇಮಲತಾ ಬಿಎಸ್.**

**ಸಹ ಪ್ರಾಧ್ಯಾಪಕರು**

**ಜೈನ್ ಡೀಮ್ಡ್- ಟು-ಬಿ ವಿಶ್ವವಿದ್ಯಾಲಯ**

**ಸಿ,ಎಮ್. ಎಸ್ ಬ್ಲಾಕ್, ಲಾಲ್ ಬಾಗ್ ರಸ್ತೆ ಬೆಂಗಳೂರು.**

ಭಾರತದ ಸಾಂಪ್ರದಾಯಿಕ ಗ್ರಾಮಜೀವನದ ಪ್ರಮುಖ ಲಕ್ಷಣವೇ ಊಳಿಗಮಾನ್ಯ ವ್ಯವಸ್ಥೆಯಾಗಿದೆ. ಹಳ್ಳಿಯೇ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಕೇಂದ್ರಬಿಂದುವಾಗಿದೆ. ಭಾರತದ ಭೂ ಸಂಪತ್ತಿನ ಹಾಗೂ ಗ್ರಾಮ ಸಂಬಂಧಗಳ ವ್ಯವಸ್ಥೆಯ ರಚನೆಯಲ್ಲಿ ಮೂರು ಮುಖ್ಯ ಅಂಶಗಳನ್ನು ಗುರುತಿಸಬಹುದು. ಅವುಗಳೆಂದರೆ 1. ಗ್ರಾಮ 2. ಜಾತಿ. 3 ಯಜಮಾನಿ ಪದ್ಧತಿ ಅಥಾವ ಯಜಮಾನಿಕೆ. ಈ ಯಜಮಾನಿಕೆಯ ಒಂದು ರೂಪ ಊಳಿಗಮಾನ್ಯ ಪ್ರಭುತ್ವ. ಜಾಜ್‌ಮಾನಿ ಎಂದರೆ ಪ್ರಮುಖ ವ್ಯಕ್ತಿ ಎಂದರ್ಥ. ಗ್ರಾಮದ ಹಿನ್ನೆಲೆಯಲ್ಲಿ ಅದನ್ನು ಭೂ ಮಾಲೀಕ ಅಥವಾ ಜಮೀನುದಾರ ಎಂದು ಕರೆಯಲಾಗುತ್ತದೆ. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಇದನ್ನು ಜಾಜ್‌ಮಾನಿ ಎಂದು ಕರೆದುಕೊಂಡು ಬರಲಾಗಿದೆ. ಜಾಜ್‌ಮಾನಿ ಅಥವಾ ಜಮೀನುದಾರಿ ಪದ್ಧತಿಯು ಜಾತಿಪದ್ಧತಿಯ ಪರಸ್ಪರಾವಲಂಭಿನೆಯ ತತ್ವದ ಮೇಲೆ ಆರ್ಥಿಕ-ಸಾಮಾಜಿಕ ಹಾಗೂ ಅಧಿಕಾರಯುತ ವ್ಯವಸ್ಥೆಯಾಗಿ ವಿಕಾಸಗೊಂಡಿದೆ. ಇಲ್ಲಿ ಉನ್ನತ ಜಾತಿಗಳು ಭೂ ಒಡೆತನವುಳ್ಳದ್ದಾಗಿದ್ದು, ಗ್ರಾಮದ ವಿಭಿನ್ನ ಜಾತಿಗಳ ನಡುವೆ ಸಾಮಾಜಿಕ. ಆರ್ಥಿಕ ಮತ್ತು ಧಾರ್ಮಿಕ ಸ್ವರೂಪದ ಸಂಬಂಧಗಳನ್ನು ಹಾಗೂ ನಿಯಂತ್ರಣವನ್ನು ಸಾಧಿಸಿದ್ದವು. ಈ ಜಮೀನುದಾರಿ ಅಥವಾ ಊಳಿಗಮಾನ್ಯ ಪದ್ಧತಿಯಲ್ಲಿ ಆಶ್ರಿತರು (ಛಿಟುಜಟಿಣ) ಮತ್ತು ಆಶ್ರಯದಾತರು (ಠಿಚಿಣಡಿಂಟಿ) ನಡುವಿನ ಸಂಬಂಧ ಮುಖ್ಯವಾಗಿರುತ್ತದೆ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ರಜಪೂತರು, ಜಾಟರು ಮತ್ತು ಭೂಮಿಹಾರರು: ಗುಜರಾತ್ ನಲ್ಲಿ ಪಟೇಲ, ಹಾಗೂ ದಕ್ಷಿಣ ಭಾರತದ ಆಂಧ್ರದಲ್ಲಿ ಕಮ್ಮಾ, ರೆಡ್ಡಿ ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರು ಅಂತಹ ಭೂಮಾಲೀಕರಾಗಿದ್ದರು. ಇವರನ್ನು ಜಮೀನುದಾರರು ಅಥವಾ

ಆಶ್ರಯದಾತರು ಎಂದು ಕರೆಯಲಾಗುತ್ತಿತ್ತು. ಈ ವರ್ಗಕ್ಕೆ ಪರೋಹಿತ ವರ್ಗ ಸೇವೆ ಸಲ್ಲಿಸುತ್ತಾ, ಮಾರ್ಗದರ್ಶಕ ವರ್ಗವಾಗಿ ಕೆಲಸಮಾಡಿತು. ಅದರ ಜೊತೆಗೆ ವಿವಿಧ ಬಗೆಯಲ್ಲಿ ಊಳಿಗಮಾನ್ಯ ವ್ಯವಸ್ಥೆಗೆ ಸೇವೆ ಸಲ್ಲಿಸುತ್ತಾ ಬಂದ ಬಡಗಿಗಳು, ಚಮ್ಮಾರರು, ಕಮ್ಮಾರರು, ಭಜಂತ್ರಿಗಳು, ಮಡಿವಾಳರು, ಕಂಬಾರರು, ನಾಯಂದರು ಮುಂತಾದ ಜಾತಿಗಳು ಆಶ್ರಿತರು ಎಂದು ಕರೆಯಲ್ಪಟ್ಟವು. ಹೆರಾಲ್ಡ್ ಗೌಲ್ಡ್ ಎಂಬ ಸಮಾಜಶಾಸ್ತ್ರಜ್ಞ ಆಶ್ರಿತರು ಮತ್ತು ಆಶ್ರಯದಾತರ ನಡುವಿನ ಮೇಲು-ಕೀಳು, ಅಂತರ್ ಕುಟುಂಬ, ಅಂತರ್ ಜಾತಿ, ಸಂಬಂಧಗಳಿಂದ ಕೂಡಿದ್ದನ್ನು ಜಾಜ್‌ಮಾನಿ ವ್ಯವಸ್ಥೆ ಎಂದು ಕರೆದಿದ್ದಾನೆ. ಜಮೀನುದಾರಿ ವ್ಯವಸ್ಥೆಯು ಇದೇ ಬಗೆಯ ಲಕ್ಷಣವುಳ್ಳದಾಗಿದೆ. ಇದರ ಪ್ರಮುಖ ಲಕ್ಷಣಗಳನ್ನು ಹೀಗೆ ಗುರುತಿಸಬಹುದಾಗಿದೆ.

ಇದು ಊರಿನ ಜಾತಿ ಸಮೂಹಗಳ ಪರಸ್ಪರಾವಲಂಬನೆಯನ್ನು ಸೂಚಿಸುತ್ತದೆ. ಸೇವೆಯನ್ನು ಪಡೆದುಕೊಳ್ಳುವ ಜಮೀನುದಾರರು ಮತ್ತು ಸೇವೆಯನ್ನು ಮಾಡುವ ಜಾತಿಗಳು, ಅಂದರೆ ಆಶ್ರಿತರ ನಡುವಿನ ಪರಸ್ಪರಾವಲಂಬನೆಯನ್ನು ಕಾಣುತ್ತೇವೆ. ಆಶ್ರಿತರು ಸಲ್ಲಿಸುವ ವಿಶಿಷ್ಟ ಬಗೆಯ ಸೇವೆಗೆ ಪ್ರೋತ್ಸಾಹ , ಭದ್ರತೆ, ಮತ್ತು ಆಶ್ರಯ ಇವು ಜಮೀನುದಾರ ಪದ್ಧತಿಗೆ ಒತ್ತಾಸೆಗಳಾಗಿದ್ದವು. ಇಲ್ಲಿ ಜಾತಿ ಅಂತಸ್ತು, ಅಧಿಕಾರ ನಿಯಮಗಳಿಗೆ ಬದ್ಧವಾಗಿ ಆಶ್ರಿತರು ಮತ್ತು ಆಶ್ರಯದಾತರ ನಡುವೆ ಕಾರ್ಯ ನಡೆಯುತ್ತಿದ್ದವು. ಪ್ರಮುಖ ಸಮಾಜಶಾಸ್ತ್ರಜ್ಞರಾದ ಹಿರೇಮಲ್ಲೂರ್ ಕೆ ಈಶ್ವರನ್ ಅವರು ಈ ಜಮಿನುದಾರಿ ಅಥವಾ ಯಜಮಾನ ವ್ಯವಸ್ಥೆಯನ್ನು ಕುರಿತು ಸಮುದಾಯದ ಬದುಕಿನಲ್ಲಿ ನಿರ್ವಹಿಸಲು ಪ್ರತಿಯೊಂದು ಜಾತಿಗೂ ಒಂದು ಪಾತ್ರವಿರುವ ವ್ಯವಸ್ಥೆ ಎಂದು ಕರೆದರೆ ಮತ್ತೊಬ್ಬ ಸಮಾಜ ಚಿಂತಕ ಯೋಗೇಂದ್ರಸಿಂಗ್ ಅವರು ಗ್ರಾಮದಲ್ಲಿ ಅಂತರ್‌ಜಾತಿ ಸಂಬಂಧಗಳಲ್ಲಿನ ಪರಸ್ಪರತೆಯನ್ನು ಆಧರಿಸಿದ ಸಂಬಂಧಗಳಿಂದ ರೂಪಿತವಾದ ವ್ಯವಸ್ಥೆ ಎಂದು ಕರೆದಿದ್ದಾರೆ. ಈ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಭಾವವನ್ನು ಸೀಮಿತ ನೆಲೆಯಲ್ಲಿ ಮಾತ್ರ ಕಾಣಬಹುದಾಗಿತ್ತು. ಜಮೀನುದಾರಿ ಪದ್ಧತಿಯ ಜಾತಿ, ಲಿಂಗ, ಆಸ್ತಿ – ಸಂಪತ್ತುಗಳ ಅಧಿಕಾರ ನೆಲೆಗಳಿಂದ ಕೂಡಿದ್ದು ಅದು ಅನುವಂಶೀಯ ಸ್ವರೂಪದ್ದಾಗಿದ್ದು ಒಡೆತನದ ಹಕ್ಕುಗಳು ತಂದೆಯಿಂದ ಮಕ್ಕಳಿಗೆ ಸಹಜವಾಗಿ ಹರಿದುಬರುತ್ತಿದ್ದವು.

ಪ್ರತಿ ಸಮಾಜದಲ್ಲಿ ಒಂದು ಜಾತಿ ಆಳುವ ಸ್ಥಿತಿಯಲ್ಲಿರುತ್ತದೆ. ಉಳಿದ ಜಾತಿಗಳು ಆಳಿಸಿಕೊಳ್ಳುತ್ತಿರುತ್ತವೆ. ರಾಜಪ್ರಭುತ್ವದ ಸಂದರ್ಭದಲ್ಲಿ ರಾಜ ತನ್ನ ರಾಜ್ಯವನ್ನು ಆಳುತ್ತಾ ಈತ ಪರಿವಾರದವರನ್ನು ತನ್ನ ಆಸ್ಥಾನದಲ್ಲಿ ಒಲೈಸಲು ಪ್ರಯತ್ನಿಸಿಸುತ್ತಿದ್ದನು.ಆನಂತರ ಹಳ್ಳಿಗಳಲ್ಲಿ ಒಂದು ಸಿರಿವಂತ ಕುಟುಂಬ ಈ ಪದ್ಧತಿಯನ್ನು ಮುಂದುವರಿಸುತ್ತಾ ಬಂದಿತು. ಇದೂ ಸಹ ಜಾಜ್‌ಮನಿ ಅಥವಾ ಜಮೀನುದಾರಿ ಪ್ರಭುತ್ವದ ಒಂದು ರೂಪದ್ದಾಗಿದೆ. ಭಾರತೀಯ ಜಮೀನುದಾರಿ ಪದ್ಧತಿಯಲ್ಲಿ ಪ್ರಭುತ್ವ ಶ್ರೀಮಂತಿಕೆ, ಮುಂದಾಳತ್ವ ಜಮೀನುದಾರಿಕೆ ಪಾಳೆಗಾರಿಕೆ, ಹಣ, ಸಂಪತ್ತು ಇವುಗಳು ಬಹುದೊಡ್ಡ ಊಳಿಗಮಾನ್ಯ ಪ್ರಭುತ್ವದ ಲಕ್ಷಣಗಳಾಗಿದ್ದವು. ಪ್ರಭುತ್ವ ಮತ್ತು ಅಧೀನತೆ ಪ್ರಬಲ ಲಕ್ಷಣಗಳಿಗೆ ನೇರವಾಗಿ ಸಂಬಂಧಿಸಿದ್ದವು. ಊರಿನ ಜಮೀನುದಾರನು ಅಲ್ಲಿ ಎಲ್ಲವನ್ನೂ ಆಳಬಲ್ಲವನಾಗಿದ್ದು ಈ ರೀತಿಯ ಸಮಾಜದಲ್ಲಿ ಆಳಿಸಿಕೊಳ್ಳುವವನು ಪ್ರಭುತ್ವಕ್ಕೆ ಶರಣಾಗತನಾಗಿರುತ್ತಿದ್ದನು. ಮುಖ್ಯವಾಗಿ ಈ ರೀತಿಯ ರಾಜಕಾರಣದಲ್ಲಿ ದರ್ಪ, ಅಹಂಕಾರ, ಪ್ರತಿಷ್ಟೆ, ಠೇಂಕಾರ, ಕ್ರೌರ್ಯ, ಎಗ್ಗಿಲ್ಲದ ಲೈಂಗಿಕತೆ ಶೋಷಣೆ, ಮೊದಲಾದವುಗಳು ಆಳುವ ಯಜಮಾನನ ಮುಖ್ಯ ಲಕ್ಷಣಗಳಾಗಿದ್ದವು. ಜಾತಿ, ವರ್ಗಗಳ, ಏಣಿ- ಶ್ರೇಣೀ, ಮೊದಲಾದ ಪರಾಂಪರಾಗತ ಮೌಲ್ಯಗಳು ಈ ವ್ಯವಸ್ಥೆಯಲ್ಲಿ ಇದ್ದವು. ಈ ಭೂ ಒಡೆತನ ಪ್ರಭುತ್ವವು ಪ್ರಾಚೀನ ಪರಂಪರೆಯುಳ್ಳದ್ದಾಗಿದ್ದು ಅದು ಭಾರತದಲ್ಲಿ ಮಧ್ಯಯುಗದ ಆಳ್ವಿಕೆಯಲ್ಲಿ ಕಾಲದುದ್ದಕ್ಕೂ ಪ್ರಬಲವಾದ ವ್ಯವಸ್ಥೆಯಾಗಿತ್ತು. ಈ ವ್ಯವಸ್ಥೆಯಲ್ಲಿ ಕೊಟ್ಟುಕೊಳ್ಳುವ ಮನೋಭಾವವಿದ್ದಿತ್ತು. ಹಾಗೇಯೇ ಇದು ಒಂದು ರೀತಿಯಲ್ಲಿ ವಿರೋಧಭಾಸದ ವ್ಯವಸ್ಥೆಯೂ ಆಗಿತ್ತು. ಇದರಲ್ಲಿ ಶೋಷಕ, ಮತ್ತು ರಕ್ಷಣಾತ್ಮಕ ಎಂಬ ಪರಸ್ಪರ

ವಿರುದ್ಧದ ಅಂಶಗಳು ಇದ್ದವು. ಆಗ ಅಸ್ತಿತ್ವದಲ್ಲಿದ್ದ ಈ ಊಳಿಗಮಾನ್ಯ ಪದ್ಧತಿಯು ಸಾಮಾಜಿಕ ವರ್ಗಗಳ ನಡುವೆ ಒಂದು ಬಗೆಯ ಅಧಿಕಾರ ಶ್ರೇಣಿಯನ್ನು ನಿರ್ಮಿಸಿದ್ದು ಒಂದು ಕರಾರಿನ ರೂಪದಲ್ಲಿ ಕಾರ್ಯಚರಣೆಯಲ್ಲಿತ್ತು. ಬಲಿಷ್ಟವಾದ ಭೂಮಾಲೀಕ ಮತ್ತು ದುರ್ಬಲನಾದ ಕೃಷಿಕ ಅಥವಾ ಭೂಹೀನ ಜೀತಗಾರನ ನಡುವೆ ಒಂದು ಕರಾರು ವಿಧಿಸಲ್ಪಟ್ಟಿತ್ತು. ಭೂಮಿಯ ಮೇಲೆ ಅಧಿಕಾರ ಹೊಂದಿದವನು ಭೂಮಾಲೀಕ . ಆ ನೆಲದಲ್ಲಿ ಬದುಕಿ ಬಾಳುವವನು ದುರ್ಬಲನಾದ ಊಳಿಗದವನು. ಬಲಿಷ್ಟನಾದವನು ದುರ್ಬಲನಾದವನಿಗೆ ರಕ್ಷಣೆಯ ಭರವಸೆಯನ್ನು ಕೊಟ್ಟಿದ್ದಕ್ಕೆ ಪ್ರತಿಯಾಗಿ ದುರ್ಬಲನಾದವನು ಅಥವಾ ಆಶ್ರಿತನಾದವನು ಆಶ್ರಯದಾತನ ಸೇವೆ ಮಾಡಿಕೊಂಡು ಬದುಕಲು ಒಪ್ಪಿಗೆಯನ್ನು ಪಡೆದುಕೊಂಡಿದ್ದನು. ಹೀಗೆ ಭಾರತೀಯ ಊಳಿಗಮಾನ್ಯ ಸಮಾಜದಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ , ಪ್ರಧಾನ ಮತ್ತು ಅಧೀನ ನಡುವೆ ನೇರವಾದ ಸಂಬಂಧವಿದ್ದಿತ್ತು. ಸಮಾನತೆ ಎನ್ನುವುದು ಈ ಸಮಾಜದಲ್ಲಿ ಇರಲಿಲ್ಲ. ಇಲ್ಲಿ ಅಧೀನವು ಪ್ರಧಾನವಾದುದನ್ನು ಅನುಸರಿಸಬೇಕಾಗಿತ್ತು. ಮತ್ತು ಒಪ್ಪಿಕೊಳ್ಳಬೇಕಾಗಿತ್ತು. ನಿರ್ದಿಷ್ಟ ರೂಪಿಯಾದ ಕಾನೂನು ಎನ್ನುವುದ ಇಲ್ಲಿ ಇರಲಿಲ್ಲ. ಆದರೆ ಈ ಜಮೀನುದಾರರು ತಮ್ಮದೇ ಸ್ವಂತ ಕೋರ್ಟುಗಳನ್ನು ಜೈಲುಗಳನ್ನು ಇರಿಸಿಕೊಂಡಿದ್ದರು. ಜಮೀನ್ದಾರಿ ಪದ್ಧತಿಯಲ್ಲಿ ಈ ಯಜಮಾನರಿಗೆ ಸ್ತ್ರೀಪುರುಷರಿಬ್ಬರಿಂದಲೂ ಬಿಟ್ಟಿ ಚಾಕರಿ ಯನ್ನು ಮಾಡಿಸಿಕೊಳ್ಳುವುದು ಸಹಜ ಹಕ್ಕೆಂಬಂತೆ ಆಗಿತ್ತು. ಯಾವುದೇ ಹೆಣ್ಣು ಮದುವೆಯ ಹೊಸ ವಧುವೆನಿಸಿದ ರಾತ್ರಿ ಈ ಯಜಮಾನನಿಗೆ ಮೀಸಲು ಎಂಬುದೂ ಅವನ ಹಕ್ಕೇ ಎನಿಸಿತ್ತು. ಆದಿಪಾಪ ಎಂಬ ಪದ್ಧತಿಯಲ್ಲಿ ಹೆಣ್ಣು ಜೀತದಾಳು ದಣಿಯ ಮಗಳ ಮದುವೆಯಲ್ಲಿ ಉಡುಗೊರೆಯ ವಸ್ತುವಾಗುತ್ತಿದ್ದಳು. ಆ ಮಗಳು ಗಂಡನ ಮನೆಗೆ ಹೊರಟರೆ ಇವಳೂ ಸೇವಕಿಯಾಗಿ ಆ ಮನೆಗೇ ಹೋಗಬೇಕಾಗಿತ್ತು. ಅಲ್ಲಿ ಹೋದ ಮೇಲೆ ತನ್ನ ಯಜಮಾನಿಯ ಸೇವೆಯ ಜೊತೆಗೆ ಅವಳ ಗಂಡನ ಲೈಂಗಿಕ ವ್ಯಸನಗಳಿಗೂ ತುತ್ತಾಗುತ್ತಿದ್ದಳು. ಇಷ್ಟು ಸಾಲವೆಂಬಂತೆ ಜಮೀನ್ದಾರರು ತಾವು ಕಣ್ಣು ಹಾಕಿದ ಯಾವುದೇ ಹೆಣ್ಣನ್ನು ಮೀಸಲು ಮುರಿಯುವುದ ಹಾಗೂ ತಮ್ಮ ಲೈಂಗಿಕ ಅಗತ್ಯಗಳಿಗಾಗಿಯೇ ಹೆಣ್ಣನ್ನು ಮೀಸಲಾಗಿಟ್ಟುಕೊಳ್ಳುವುದು ಕೂಡ ತೀರ ಸಹಜವೇ ಆಗಿತ್ತು.

ಪಾಶ್ಚ್ಯಾತ್ಯಾ ಯೂರೋಪಿನ ಮಧ್ಯಕಾಲೀನ ಯುಗದಲ್ಲಿ ಊಳಿಗಮಾನ್ಯ ಪದ್ಧತಿಯ ಅತ್ಯಂತ ಪ್ರಬಲವಾಗಿ ಅಸ್ತಿತ್ವದಲ್ಲಿತ್ತು. ಇದನ್ನು ಎಸ್ಟೇಟ್ಸ್ ಗಳೆಂದು ಕರೆಯಲಾಗುತ್ತಿತ್ತು. ಇದು ಆರ್ಥಿಕ, ರಾಜಕೀಯ, ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಿತ್ತು. ಅಲ್ಲೂ ಸಹ ಅದು ಪ್ರಬಲ ದುರ್ಬಲ ರ ನಡುವೆ ಒಂದು ಕರಾರಿನ ರೂಪದಲ್ಲಿ ಹೆಚ್ಚು ಚಾಲ್ತಿಯಲ್ಲಿತ್ತು. ವಿಲ್ ಡ್ಯೂರಾಂಟ್ ಎಂಬ ಸಮಾಜಶಾಸ್ತ್ರಜ್ಞ ತಾತ್ವಿಕವಾಗಿ ಊಳಿಗಮಾನ್ಯ ಪದ್ಧತಿ ಎಂಬುದು ದುರ್ಬಲವರ್ಗದವರು ಸಂಕಟಕ್ಕೀಡಾದ ಸಂಕೀರ್ಣ ಸ್ಥಿತಿ. ಇದು ಜನಸಮುದಾಯದವರನ್ನು ಅನ್ಯೋನ್ಯವಾದ ಹಂಗು ರಕ್ಷಣೆ, ಮತ್ತು ಸ್ವಾಮಿನಿಷ್ಠಗಳೆಂಬ ಸಂಕೀರ್ಣವಾದ ಜಾಲವೊಂದರಲ್ಲಿ ಅನೋನ್ಯವಾದ ಪರಸ್ಪರ ಬಿಗಿಯುವ ಒಂದು ಪದ್ಧತಿ. ಎಂದು ಕರೆದಿದ್ದಾನೆ. ಪಾಶ್ಚ್ಯಾತ್ಯರಲ್ಲಿ ಊಳಿಗಮಾನ್ಯ ಪದ್ಧತಿಯು ಅಸ್ತಿತ್ವದಲ್ಲಿದ್ದಾಗ ಎಸ್ಟೇಟ್ ಗಳೆಂದು ಕರೆಯಿಸಿಕೊಳ್ಳಲ್ಪಡುತ್ತಿದ್ದ ವರ್ಗಗಳು ತಮ್ಮದೇ ಆದ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅದೆಂದರೆ ಒಂದು ಶ್ರೀಮಂತರು, ಎರಡು ಪುರೋಹಿತ ವರ್ಗ, ಮೂರು ಊಳಿಗದಾರ ವರ್ಗ. ಶ್ರೀಮಂತರು ಅಥವಾ ಭೂ ಒಡೆಯರು ಪಾಳೇಗಾರರಂತಹ ತುಂಡರಸರೇ ಆಗಿದ್ದರು. ಇವರು ಎಲ್ಲರನ್ನು ರಕ್ಷಿಸುವ ಸಲುವಾಗಿ ಹೋರಾಟ ಮಾಡಬೇಕಾಗಿತ್ತು. ಪರೋಹಿತ ವರ್ಗವು ಎಲ್ಲರ ಶ್ರೇಯಸ್ಸಿಗಾಗಿ ಪ್ರಾರ್ಥನೆ ಮಾಡಬೇಕಿತ್ತು. ಊಳಿಗದಾರ ವರ್ಗವು ಎಲ್ಲರಿಗೂ ಎಲ್ಲಾ ಬಗೆಯ ಸೇವೆಗಳನ್ನು ಹಾಗೂ ಆಹಾರವನ್ನು ಪೂರೈಕೆ ಮಾಡುವ ( ಅಂದರೆ, ಕೃಷಿ ಕಾರ್ಯಗಳಲ್ಲಿ ನಿರತರಾಗಬೇಕಾದ) ಕಾರ್ಯಭಾರವನ್ನು ಹೊರಬೇಕಿತ್ತು. ಭಾರತದಲ್ಲೂ ಈ ಬಗೆಯ ಶ್ರೇಣಿಕೃತ ವ್ಯವಸ್ಥೆ ಜಾರಿಯಲ್ಲಿತ್ತು. ಹಳೆಯ ರಾಜಪ್ರಭುತ್ವದ ತುಣುಕಾಗಿಯೇ ಜಮೀನುದಾರಿ ಒಡೆತನ ಆಡಳಿತ ಮಾಡುತ್ತಿದ್ದುದು ಕಂಡು ಬರುತ್ತದೆ.

ಕಾರ್ಲ್‌ಮಾರ್ಕ್ಸ್ ನ ಪ್ರಕಾರ ಪಶ್ಚಿಮ ಯೂರೋಪಿನಲ್ಲಿ ಬಂಡವಾಳಶಾಯಿ ವ್ಯವಸ್ಥೆಯು ಸ್ಥಾಪನೆಯಾಗುವುದಕ್ಕಿಂತ ಮುಂಚೆ ಅಸ್ತಿತ್ವದಲ್ಲಿದ್ದ ಉತ್ಪಾದನಾ ವಿಧಾನವೇ ಊಳಿಗಮಾನ್ಯ ಉತ್ಪಾದನಾ ವಿದಾನ. ಈ ಹಂತದಲ್ಲಿ ಭೂಮಿಯು ಸಂಪೂರ್ಣವಾಗಿ ಖಾಸಗಿ ಆಸ್ತಿಯಾಗಿ ಮಾರ್ಪಟ್ಟಿತು. ಉತ್ಪಾದನಾ ಸಾಮಾಗ್ರಿಗಳು ಕೆಲವರ ಒಡೆತನಕ್ಕೆ ಬಂದು ಉಳಿದವರು ಅವರ ಬಳಿ ಊಳಿಗದವರಂತೆ (ಆಳುಗಳಂತೆ, ಜೀತದವರಂತೆ) ದುಡಿಯಬೇಕಾದ ಪರಿಸ್ಥಿತಿಯೊದಗಿತು. ಅಂದರೆ ಊಳಿಗಮಾನ್ಯ ಸಮಾಜವು ಉಳಿಗಮಾನ್ಯ ಉತ್ಪಾದನಾ ವಿಧಾನದ ಫಲಶೃತಿಯಾಯಿತು. ಈ ಸಮಾಜದ ಶ್ರೀಮಂತ ಜಮೀನುದಾರು ರಾಜಕೀಯ ಹಾಗೂ ಕಾನೂನಿನ ಅಧಿಕಾರವನ್ನು ಬಳಸಿಕೊಂಡು ತಮ್ಮ ಭೂಮಿಯಲ್ಲಿ ದುಡಿಯುತ್ತಿದ್ದ ಅರೆಗುಲಾಮ ಗೇಣಿದಾರರಿಂದ ಆರ್ಥಿಕ ಮಿಗುತೆಯನ್ನು ( ಇಛಿಂಟಿಂಟುಛಿ ಖಣಡಿಠಿಟಣ) ಸಂಪಾದಿಸಲು ಸಮರ್ಥರಾದರು.

ಆದರೆ ಭಾರತದ ವಸಾಹತುಶಾಯಿ ಸಂದರ್ಭದಲ್ಲಿ ಈ ಬಗೆಯ ಪ್ರಭುತ್ವವನ್ನು ವಿರೋಧಿಸುವುದಕ್ಕೆ, ಗುಲಾಮಿ ಸ್ಥಿತಿಯಿಂದ ವಿಮುಕ್ತಿಗೊಳ್ಳುವುದಕ್ಕೆ ಜನಸಮುದಾಯವು ಆಯ್ಕೆ ಮಾಡಿಕೊಂಡು ಪ್ರಮುಖ ಅಸ್ತ್ರವೆಂದರೆ ರಾಷ್ಟ್ರೀಯ ಆಂದೋಲನ. ಆ ಹೊತ್ತಿಗೆ ಸಮಾನತೆ ಮತ್ತು ಸ್ವಾತಂತ್ರ್ಯ ಎನ್ನುವ ಹೊಸ ಕಲ್ಪನೆಗಳೂ ಒಡಮೂಡಿದ್ದವು. ವಸಾಹತುಶಾಯಿ ಸಂದರ್ಭದಲ್ಲಿ ಊಳಿಗಮಾನ್ಯ ಉತ್ಪಾದನಾ ವಿಧಾನವು ಸಾಂಪ್ರದಾಯಿಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಗುತ್ತಿದ್ದಂತೆ ಇತ್ತ ನಗರಗಳೂ ಕೂಡ ಬೆಳೆಯತೊಡಗಿದವು. ಇಲ್ಲಿ ಗಿರಣಿಗಳ ಸ್ಥಾಪನೆ,ಯಂತ್ರ ಮತ್ತು ತಂತ್ರಗಳ ಬಳಕೆಯಿಂದ ಉತ್ಪಾದನಾ ಸಂಬಂಧದಲ್ಲಿ ಗಂಭಿರ ಸ್ವರೂಪದ ಬದಲಾವಣೆಗಳಾದವು. ಈ ಬದಲಾವಣೆಯ ಜೊತೆಗೆ ಭಾರತದಲ್ಲಿ ನಗರಗಳ ಬೆಳವಣಿಗೆ ವ್ಯಾಪೋರೋಧ್ಯಮಗಳ ಬೆಳವಣಿಗೆಗಳಿಂದಾಗಿ ಊಳಿಗಮಾನ್ಯ ಪದ್ಧತಿ ದುರ್ಬಲಗೊಳ್ಳಲು ಬಂಡವಾಳ ಪದ್ಧತಿಯತ್ತ ಸಮಾಜ ಪರಿವರ್ತನೆಯಾಗಲು ಕಾರಣವಾಯಿತು. ಮಾರ್ಕ್ಸ್ ಈ ಬಗೆಯ ಗತಿಶೀಲತೆಯನ್ನು ಗುರುತಿಸಿದ್ದಾನೆ.

ಭಾರತದ ಸ್ವಾತಂತ್ರ್ಯೋತ್ತರದ ಎಪ್ಪತ್ತರ ದಶಕದ ಕಾಲದಲ್ಲಿ ಉಳುವವನೇ ಹೊಲದೊಡೆಯ ಎಂಬ ನೀತಿ ಜಾರಿಗೆ ಬಂದಿತು. ಈ ನೀತಿ ಆಧುನಿಕ ರಾಜಕೀಯ ಹಾಗೂ ಸಾಮಾಜಿಕ ಸಂಘರ್ಷಗಳ ಫಲವೇ ಆಗಿತ್ತು. ಇದರಿದಾಗಿ ಹೊಸ ಭೂ ಒಡೆಯರ ವರ್ಗವೊದು ನಿರ್ಮಾಣವಾಯಿತು. ಈ ವರ್ಗವು ಮುಖ್ಯವಾಗಿ ಕೆಳಜಾತಿ, ಕೆಳವರ್ಗದವರಿಂದ ಕೂಡಿದ್ದಾಗಿತ್ತು. ರೈತ-ಯಜಮಾನ ರೈತ ಜೀತಗಾರ ಈ ಸಂಬಂಧಗಳಲ್ಲಿ ಹೊಸ ಸಮೀಕರಣಗಳು ಆರಂಭವಾದವು. ಭೂಮಿ ಮತ್ತು ಉತ್ಪಾದನೆಗೆ ಕೆಳಜಾತಿ ಹಾಗೂ ಕೆಳವರ್ಗಗಳು ನಿಖರವಾದ ಹಕ್ಕು ಹಾಗೂ ಸ್ವಾಮ್ಯವನ್ನು ಗಳಿಸಿಕೊಂಡವು.

ಕರ್ನಾಟಕ ರಾಜ್ಯದಲ್ಲಿ ಬಯಲುನಾಡು ಪ್ರದೇಶ, ಮಲೆನಾಡು ಪ್ರದೇಶ, ಹಾಗೂ ತೀರ ಪ್ರದೇಶಗಳು ತಮ್ಮದೇ ಆದತಂಹ ವೈಶಿಷ್ಯ ಪೂರ್ಣವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ಈ ಪ್ರದೇಶಗಳಲ್ಲಿ ಅನೇಕ ಸಾಮ್ರಾಜ್ಯಗಳು, ಆಡಳಿತ, ಆರ್ಥಿಕ ವ್ಯವಸ್ಥೆ ಸಾಮಾಜಿಕ ವ್ಯವಸ್ಥೆ, ಹಾಗೂ ಧಾರ್ಮಿಕ ವ್ಯವಸ್ಥೆಯ ಹಲವಾರು ಕ್ಷೇತ್ರಗಳಲ್ಲಿ ಬಹಳಷ್ಟು ರೀತಿಯ ಬದಲಾವಣೆಗಳು ಕಂಡು ಬಂದಿವೆ. ಆ ಬದಲಾವಣೆಗಳಲ್ಲಿ ಕ್ರಿ.ಶ. ೧೬ ರಿಂದ ೧೭ನೇ ಶತಮಾನದ ಕೊನೆಯವರೆಗೆ ಕಾಣಿಸಿಕೊಂಡತಹ ಊಳಿಗಮಾನ್ಯ ವ್ಯವಸ್ಥೆ ಎಂಬುದು ಅತ್ಯಂತ ಗಹನವಾದದು. ಹಾಗೂ ಆಸಕ್ತಿಯುತವಾದಂತಹ ವಿಷಯವಾಗಿದೆ. ಅದರಲ್ಲೂ ವಿಕೇಂದ್ರಿಕೃತ ಆಡಳಿತ ಹೊಂದಿದ್ದ ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ/ ರಕ್ಕಸತಂಗಡಿ ಯುದ್ಧದ ಪತನಾ ನಂತರ ರಾಜಕೀಯ ವ್ಯವಸ್ಥೆಯು ಅವ್ಯವಸ್ಥಿತವಾಗಿದ್ದು ಈ ಅವ್ಯವಸ್ಥೆಯ ಕಾರಂದಿಂದಾಗಿ ರಾಜಕೀಯ ಪರಿಸ್ಥಿತಿ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿ ಹಾಗೂ ರಕ್ಷಣೆಯನ್ನು ಮಾಡುವಂತಹ ವಿಜಯನಗರ ಅರಸರಾಗಲಿ ಅಥವಾ ಭದ್ರಕೇಂದ್ರಿತ ಆಡಳಿತದ ವ್ಯವಸ್ಥೆ ಇಲ್ಲದೆ ಇರುವುದು ಕಂಡು ಬಂದಿತ್ತು.ಇಂತಹ ಒಂದು ಅವ್ಯವಸ್ಥೆಯ ಸದುಪಯೋಗಪಡಸಿಕೊಂಡು ವಿಜಯನಗರ ಕಾಲದಲ್ಲಿ ಸಾಮಂತರಾಗಿ, ಭೂ ಉಂಬಳಿ ಪಡೆದು ಕಾರ್ಯವನ್ನು ನಿರ್ವಹಿಸುತ್ತಿದ್ದು ಅನೇಕ ಸಾಮಂತರು, ಅಮರನಾಯಕರು ಸ್ವತಂತ್ರವಾಗಿ ಆಡಳಿತವನ್ನು ನಡೆಸಲು ಪ್ರಯತ್ನ ಪಟ್ಟು

ಯಶಸ್ವಿಯು ಸಹ ಆಗುತ್ತಾರೆ. ಅವರುಗಳಲ್ಲಿ ಕೆಳದಿ ನಾಯಕರು, ಚಿತ್ರದುರ್ಗದ ಪಾಳೇಗಾರರು, ಯಲಹಂಕದ ನಾಡಪ್ರಭುಗಳು, ಮೈಸೂರಿನ ಒಡೆಯರ ವಂಶ, ಹಾಗೂ ತೀರ ಪ್ರದೇಶದ ಭೈರವ ಅರಸರು, ಅಳುಪರು, ಸೋದೆ ಅರಸರು, ಗಡುನಾಡ ಸಣ್ಣಪುಟ್ಟ ಪಾಳೆಪಟ್ಟುಗಳು ಸೇರಿದಂತೆ ಮುಂತಾದವರು ತನ್ನ ಸ್ವತಂತ್ರವನ್ನು ಘೋಷಿಸಿಕೊಂಡು ಕ್ಷೇತ್ರವನ್ನು ತಮ್ಮದಾಗಿಸಿಕೊಂಡು ಉಳಿದ ಎಲ್ಲಾ ಕ್ಷೇತ್ರಗಳ ಮೇಲ್ವಿಚಾರಣೆಯನ್ನು ನೋಡಲು ಪ್ರಾರಂಭಿಸುತ್ತಾರೆ.

ಈ ಮೇಲೆ ತಿಳಿಸಿದ ರಾಜಕೀಯ ಸಾಮತಂರಯ ಮೂಲತಃ ಭೂಮಿಯ ಮೇಲಿನ ಹಕ್ಕುಗಳನ್ನು ಹಾಗೂ ಭೂಮಾನ್ಯ ಹೊಂದಿದಂತಹ ಭೂ ಅಧಿಕಾರಿಗಳು. ವಿಜಯನಗರ ಕಾಲದಲ್ಲಿ ಭೂಮಿಯ ಮೇಲಿನ ಹಕ್ಕನ್ನು ಪಡೆದುಕೊಂಡು ಅವರಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಾ ಈ ಭೂಮಿಯ ಮೇಲಿನ ತೆರಿಗೆ ಹಾಗೂ ಇತರೆ ತೆರಿಗೆಗಳನ್ನು ವಸೂಲಿ ಮಾಡ ಈ ತೆರಿಗೆಯಲ್ಲಿ ಅಲ್ಲಿಯ ಜನರ ಯೋಗಕ್ಷೇಮವನ್ನು ನೋಡುವಂತಹ ಕಾರ್ಯವನ್ನು ಮಾಡುತ್ತಿದ್ದರು. ಆದರೆ ವಿಜಯನಗರದ ಅವನತಿಯ ನಂತರದಲ್ಲಿ ಈ ಭೂ ಅಧಿಕಾರಿಗಳು ರಾಜಕೀಯ ಶಕ್ತಿಗಳಾಗಿ ಮಾರ್ಪಟ್ಟು ಈ ರಾಜ್ಯದ ಎಲ್ಲಾ ಕ್ಷೇತ್ರಗಳ ಅಭಿವೃದ್ದಿಯ ಕಡೆ ಗಮನ ಕೊಡುವಂತಹ ಕಾರ್ಯಗಳನ್ನು ಮಾಡಿರುವುದನ್ನು ಕರ್ನಾಟಕದಲ್ಲಿ ಊಳಿಗಮಾನ್ಯ ವ್ಯವಸ್ಥೆ ಎನ್ನಬಹುದು.

ಊಳಿಗಮಾನ್ಯ ವ್ಯವಸ್ಥೆ ಎಂಬುದು ಪ್ರಪಂಚದ ಹಲವಾರು ವಿದ್ವಾಂಸರ ಪ್ರಕಾರ ಯುರೋಪಿನ ಒಂದು ಆರ್ಥಿಕ ನೀತಿ, ಭೂ ಉಂಬಳತನದ ವ್ಯವಸ್ಥೆ, ಇಲ್ಲಿನ ಆರ್ಥಿಕ ಕ್ಷೇತ್ರುಲ್ಲಿ, ಭೂಮಿ, ಕೃಷಿ, ರೈತ, ಜಮೀನ್ದಾರಿ ನೀಡುವ ಕಾಣಿಕೆಗಳು, ಸೇವೆಗಳು, ತೆರಿಗೆಗಳು ಮುಂತಾದ ಅಂಶಗಳು ಪ್ರಮುಖವಾಗಿ ತಮ್ಮ ಪಾತ್ರವಹಿಸುತ್ತವೆ. ಯೂರೋಪಿನ ವಿದ್ವಾಂಸರ ಪ್ರಕಾರ ಭೂ ಅಧಿಕಾರಗಳು ರಾಜ್ಯ ಮತ್ತು ಪ್ರಜೆಗಳ ನಡುವಿನ ಮಧ್ಯಸ್ಥಿಕೆಗಾರರಾಗಿ ಕಾರ್ಯವನ್ನು ನಿರ್ವಹಿಸುತ್ತಾ ರಾಜ್ಯಕ್ಕೆ ಸಲ್ಲಬೇಕಾದಂತಹ ತೆರಿಗೆಯನ್ನು ಸಲ್ಲಿಸುವಲ್ಲಿ ತಮಗೆ ಸಂಬಂಧಪಟ್ಟಂತಹ ಪ್ರದೇಶಗಳಲ್ಲಿ ತೆರಿಗೆಯ ವಸೂಲತಿ ಕಾರ್ಯಗಳು, ರೈತರ ಹಾಗೂ ಕಾರ್ಮಿಕರ ಯೋಗಕ್ಷೇಮದ ನಿರ್ವಹಣೆ ಮತ್ತು ತಮ್ಮ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳು ಈ ಎಲ್ಲಾ ವ್ಯವಸ್ಥೆಗಳನ್ನು ನೋಡಿಕೊಳ್ಳುವಂತಹ ಕಾರ್ಯಗಳನ್ನು ಇವರು ನಿರ್ವಹಿಸುತ್ತಿದ್ದರು. ಈ ಎಲಾ ಕಾರಣಗಳಿಂದ ಇವರನ್ನು ಊಳಿಗಮಾನ್ಯರು ಎಂಬುದಾಗಿ ಕರೆಯುತ್ತಿದ್ದು ಈ ವ್ಯವಸ್ಥೆಯನ್ನು ಊಳಿಗಮಾನ್ಯ ವ್ಯವಸ್ಥೆ ಎಂಬುದಾಗಿ ಪರಿಗಣಿಸುತ್ತಿದ್ದರು. ಆದರೆ ಕರ್ನಾಟಕ ರಾಜ್ಯದ ಊಲಿಗಮಾನ್ಯ ವ್ಯವಸ್ಥೆಯು ಯೂರೋಪಿಯನ್ ಊಳಿಗಮಾನ್ಯ ವ್ಯವಸ್ಥೆಗಿಂತ ಭಿನ್ನವಾಗಿರಲು ಕಾರಣವೇನೆಂದರೆ ಕರ್ನಾಟಕದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕಾಣಿಸಿಕೊಳ್ಳುವ ಊಳಿಗಮಾನ್ಯರು ಕರ್ನಾಟಕ ರಾಜ್ಯದ ರಾಜಕೀಯ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಡೆಸಲು ಸಾಮ್ರಾಟರೊಂದಿಗೆ ಕೈಜೋಡಿಸಿ ಕಾರ್ಯವನ್ನು ನಿರ್ವಹಿಸುತ್ತಿದ್ದಂತಹ ಸಾಮಂತರು, ಜಮೀನ್ದಾರರು, ಆಡಳಿತಾಧಿಕಾರಿಗಳು ಮುಂತಾದ ವರ್ಗಕ್ಕೆ ಸೇರಿದವರಾಗಿದ್ದರು. ಇದಲ್ಲದೆ ಈ ಊಳಿಗಮಾನ್ಯರು ಮಧ್ಯಮ ವರ್ಗ ಹಾಗೂ ಕೆಳಸ್ತರ ವರ್ಗಕ್ಕೆ ಸೇರಿದ್ದಂತಹ ಜನರು. ಈ ವರ್ಗದ ಜನರು ಕೇಂದ್ರಾಡಳಿತದ ಪತನಾನಂತರ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡು ತಮ್ಮ ತಮ್ಮ ಪ್ರದೇಶಗಳ ಆಡಳಿತ ಹಾಗೂ ಯೋಗಕ್ಷೇಮದ ಕಾರ್ಯಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದುದ್ದನ್ನು ಕಾಣುತ್ತೇವೆ. ಈ ಒಂದು ವ್ಯವಸ್ಥೆ ಆ ಕಾಲದ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತಹ ವಿಷಯವಾಗಿ ಸಂಶೋಧಕರಿಗೆ ಕಾಣಿಸಿಕೊಳ್ಳುತ್ತದೆ. ಏಕೆಂದರೆ ರಾಜರ ಅನುಪಸ್ಥಿತಿಯಲ್ಲಿ ಆಡಳಿತದ ಮೇಲ್ವಿಚಾರಣೆಯನ್ನು ಯಾರಾದೊಬ್ಬರು ಮಾಡುವಂತಹ ಅವಶ್ಯಕತೆ ಇತ್ತು. ಹೀಗಾಗಿ ಮಧ್ಯಮವರ್ಗ ಹಾಗೂ ಕೆಳಸ್ತರದ ವರ್ಗಗಳು ಇಂತಹ ಅವಕಾಶವನ್ನು ಉಪಯೋಗಿಸಿಕೊಂಡು ಈ ವ್ಯವಸ್ಥಿತವಾದಂತಹ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಜಾತಿಗೆ ತಂದರು. ಈ ವ್ಯವಸ್ಥೆಯಲ್ಲಿ ಕಾಣಿಸುವಂತಹ ವರ್ಗಗಳೆಂದರೆ ಶೈವರು, ಕುರುಬರು, ಬೇಡರು, ಒಕ್ಕಲಿಗರು ಮುಂತಾದ ವರ್ಗದವರು ಈ ವ್ಯವಸ್ಥೆಯಲ್ಲಿ ಪಾಲ್ಗೊಂಡು ರಾಜ್ಯದಲ್ಲಿ ಆಡಳಿತ ನಡೆಸಿ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನದಲ್ಲಿ ಯಶಸ್ವಿಯಾದ ಕಾರ್ಯವನ್ನು ನಿರ್ವಹಿಸಿದ್ದಾರೆ ಎಂಬುದನ್ನು ನಾವು ನೋಡಬಹುದು.

ಊಳಿಗಮಾನ್ಯ ವ್ಯವಸ್ಥೆಯು ಮಧ್ಯಕಾಲೀನ ಯೂರೋಪಿನ ವ್ಯವಸ್ಥೆ ಎಂಬುದಾಗಿ ಹಲವು ವಿದ್ವಾಂಸರು ಕರೆದಿರುವುದಾಗಿ ಈ ವ್ಯವಸ್ಥೆಯು ಭಾರತದ ಮಧಕಾಲೀನ ರಾಜ್ಯಗಳಲ್ಲೂ ಮೂಡಿಬಂದಿರುವುದು ಇತಿಹಾಸವನ್ನು ಕೂಲಂಕುಶವಾಗಿ ವಿಶ್ಲೇಷಿಸಿದಾಗ ಈ ವ್ಯವಸ್ಥೆಯ ಅಸ್ತಿತ್ವವು ಗೋಚರಿಸುತ್ತದೆ. ಇಂತಹ ಒಂದು ವ್ಯವಸ್ಥೆಯು ಮಧ್ಯಕಾಲೀನ ಕರ್ನಾಟಕದಲ್ಲಿ ವಿಜಯನಗರೋತ್ತರ ಕಾಲದಲ್ಲಿ ಹಲವು ಊಳಿಗಮಾನ್ಯ ರಾಜ್ಯಗಳು ತಮ್ಮ ಆರ್ಥಿಕ ಬಲಗಳನ್ನು ಉಪಯೋಗಿಸಿಕೊಂಡು ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಯನ್ನು ತಮ್ಮದಾಗಿಸಿಕೊಂಡು ಊಳಿಗಮಾನ್ಯ ಸಮಾಜವನ್ನು ನಿರ್ಮಿಸಿಕೊಮಡು ಅದರ ನೆರಳಲ್ಲಿ ರಾಜ್ಯಾಡಳಿತವನ್ನು ನಡೆಸಲು ತೀರ್ಮಾನಿಸಿ ತಮ್ಮ ರಾಜ್ಯಗಳು ಉತ್ತಮವಾಗಿ ಮುಂದುರೆಯಲು ಅನೇಕ ರೀತಿಯ ಬದಲಾವಣೆಗಳನ್ನು ಮಾಡಿಕೊಂಡು ರಾಜ್ಯಡಳಿತವನ್ನು ನಡೆಸಿರುವುದನ್ನು ಈ ಕಾಲದಲ್ಲಿ ಆಳಿದಂತಹ ಅನೇಕ ರಾಜ್ಯಗಳಿಗೆ ಸಂಬಂಧಪಟ್ಟಂತಹ  ಪ್ರಾಕ್ತಾನ ಆಧಾರಗಳು ಹಾಗೂ ಬರವಣಿಗೆಯ ಆಧಾರಗಳ ಮೂಲಕ ಅಲ್ಲದೆ ಅವರ ಕಾಲದಲ್ಲಿ ಕಂಡು ಬಂದಂತಹ ಅನೇಕ ಸ್ಮಾರಕಗಳು ನೀಡುವ ಮಾಹಿತಿಗಳನ್ನು ಅನುಸರಿಸಿ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ ಮಾಹಿತಿಗಳನ್ನು ಪಡೆಯಬಹುದು.

ಈ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಊಳಿಗಮಾನ್ಯ ಪ್ರಭುಗಳು ತಮ್ಮ ಆಡಳಿತವನ್ನು ಸ್ಥಾಪಿಸಿಕೊಂಡು ಭೂಮಿ, ಕೈಗಾರಿಕೆ, ವ್ಯಾಪಾರ ಹಾಗೂ ಸಾರಿಗೆ ಸಂಪರ್ಕ ಮಾಧ್ಯಮಗಳನ್ನು ಸ್ಥಾಪಿಸಿಕೊಂಡು ಆಡಳಿತ ಸೂತ್ರವನ್ನು ತಮ್ಮಲ್ಲಿಟ್ಟು ಕೊಂಡು ನಡೆಸಿರುವುದನ್ನು ಅನೇಕ ದಾಖಲೆಗಳು ತಿಳಿಸುತ್ತವೆ. ಈ ವ್ಯವಸ್ಥೆಗೆ ಒಳಪಟ್ಟಂತಹ ರೈತರು, ಶ್ರಮಿಕರು, ಕಸುಬುದಾರರು ಹಾಗೂ ಸಣ್ಣಪುಟ್ಟ ವ್ಯಾಪಾರಸ್ಥರು ಈ ವ್ಯವಸ್ಥೆಯಿಂದ ಅನೂಕೂಲಕರವಾಗಿ ಜೀವನ ನಡೆಸುತ್ತಿದ್ದುದ್ದರ ಬಗ್ಗೆ ಮಾಹಿತಿಗಳು ಹಲವು ಆಧಾರಗಳಲ್ಲಿ ದೊರೆತಿವೆ. ಈ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ  ಅಧ್ಯಾಯನ ನಡೆಸಿರುವ ಅನೇಕ ಇತಿಹಾಸ ವಿದ್ವಾಂಸರಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಸ್ಟಬ್ಸ್, ಮೀಟಲ್ಯಾಮಡ್, ಹೆನ್ರಿಮೈನೆ ಮತ್ತು ಜಿ.ಬಿ. ಆಡಂಸನ್ ಅವರು ಈ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ ಹಲವು ಆಯಾಮಗಳಲ್ಲಿ ಸಂಶೋಧನೆಯನ್ನು ನಡೆಸಿ ಉತ್ತಮ ರೀತಿಯ ವಿವರಣೆಗಳನ್ನು ನೀಡಿದ್ದಾರೆ. ಈ ವಿದ್ವಾಂಸರಲ್ಲದೆ ಕಾರ್ಲ್‌ಮಾಕ್ಸ್, ಮ್ಯಾಕ್ಸವೆಬ್ಬರ್, ಮಾರ್ಚ್ ಬ್ಲಾಕ್, ಸ್ರೇಯರ್ ಹಾಗೂ ಆಲ್ಪ್ರೆಡ್ ಕ್ರೋಬರ್ ಮುಂತಾದವರು ಸಹ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳಲ್ಲಿ ಈ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಈ ವ್ಯವಸ್ಥೆಯ ಆಡಳಿತದ ವೈಖರಿಯ ಬಗ್ಗೆ ಅನೇಕ ರೀತಿಯ ಮಾಹಿತಿಗಳನ್ನು ಒದಗಿಸಿದ್ದಾರೆ.

ಈ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ ಭಾರತೀಯ ವಿದ್ವಾಂಸರು ಸಹ ಅಧ್ಯಾಯನ ಹಾಗೂ ಸಂಶೋಧನೆಯನ್ನು ಮಾಡುವ ಕಾರ್ಯದಲ್ಲಿ ಹಿಂದುಳಿದಿಲ್ಲ. ಇವರು ಸಹ ಈ ವ್ಯವಸ್ಥೆಯ ಅಸ್ತಿತ್ವದ ಬಗ್ಗೆ ಉತ್ತಮವಾದ ಅಧ್ಯಯನವನ್ನು ಮಾಡಿರುವವರು ಅವರಲ್ಲಿ ಪ್ರಮುಖರೆಂದರೆ ಡಿ.ಡಿ.ಕೊಸಾಂಬಿ, ಆರ್. ಎಸ್.ಶರ್ಮ, ಬಿಎನ್, ಎಸ್. ಯಾದವ. ಟಿ.ವಿ. ಮಹಲಿಂಗಮ್. ಕೆ.ಎಸ್ ಶಿವಣ್ಣ ಮುಂತಾದವರು ಈ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಡೆಸಿ ದಾಖಲೆಗಳ ಮೂಲಕ ವಿವರಣೆಗಳನ್ನು ನೀಡಿರುವರು. ಈ ವಿದ್ವಾಂಸರ ಪ್ರಕಾರ ಈ ಊಳಿಗಮಾನ್ಯ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೇ ಜಾರಿಯಲ್ಲಿದ್ದುದರ ಬಗ್ಗೆ ಸಕಾರಾತ್ಮಕವಾದ ವಿವರಗಳನ್ನು ಉದಾಹರಣೆಗಳ ಸಹಿತ ನೀಡಿರುವರು.

ಇಪ್ಪತ್ತನೇಯ ಶತಮಾನದ ಕನ್ನಡ ಬರಹಾಗರರು ತಮ್ಮ ಬರವಣಿಗೆಯಲ್ಲಿ ಊಳಿಗಮಾನ್ಯ ವ್ಯವಸ್ಥೆ, ಭೂಮಾಲಿಕ ಮತ್ತು ಗೇಣಿದಾರನ ಸಂಬಂಧ ಹಾಗೂ  ಕೆಳವರ್ಗದವರ ಜೀತದ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಶಿವರಾಮ ಕಾರಂತರ ಚೋಮನದುಡಿ, ಕುವೆಂಪುರವರ ಕಾನೂರು ಹೆಗ್ಗಡತಿ, ಹಾಗೂ ದೇವನೂರು ಮಹಾದೇವ ಅವರ ಕಥೆಗಳಲ್ಲಿ ಜಮೀನುದಾರಿ ಪದ್ದತಿ ಮತ್ತು ಜೀತ ಕುರಿತಂತೆ ಈ ಲೇಖಕರು ಹೊಸ ದೋರಣೆ ಹಾಗೂ ನಿಲುವುಗಳನ್ನು ಕಾಣಬಹುದಾಗಿದೆ. ಅವರ ಎರಡು ಕಾದಂಬರಿಗಳು ಕೂಡ ಜಮೀನುದಾರಿ ಪದ್ದತಿಯ ಯಜಮಾನ್ಯದ ಸ್ವರೂಪವನ್ನು ಹೇಳುವ ಉತ್ತಮ ಸಾಹಿತ್ಯ ಕೃತಿಯಾಗಿದೆ. ಚಂದ್ರಶೇಖರ ಕಂಬಾರರು " ಜೋಕುಮಾರಸ್ವಾಮಿ, ನಾಯೀಕತೆ, ಸಿರಿಸಂಪಿಗೆ ಜೈಸಿದನಾಯ್ಕ ಸಂಗ್ಯಾ ಬಾಳ್ಯಾ ಮೊದಲಾದ ನಾಟಕಗಳಲ್ಲಿ ಜಮೀನುದಾರಿ ಪದ್ದತಿಯ ಅಧಿಕಾರದ

ಸ್ವರೂಪವನ್ನು ಶೋಧಿಸುತ್ತಾರೆ. ಪ್ರಭು ಮತ್ತು ಧಣಿ ಇವರ ಸಂಬಂಧ, ಪ್ರಭುವರ್ಗದ ತಿರಸ್ಕಾರ, ಅಳಿಸಿಕೊಳ್ಳುವ ವರ್ಗದ ವೈಭವೀಕರಣ ಇವುಗಳನ್ನೆಲ್ಲಾ ಚರ್ಚೆ ಮಾಡುತ್ತಾ ಬರಗೂರು ರಾಮಚಂದ್ರಪ್ಪನವರು ಕಂಬಾರರ ನಾಯೀಕತೆ ನಾಟಕದ ಮುನ್ನುಡಿಯಲ್ಲಿ ಹೇಳುವ ಕೆಲವು ಒಳನೋಟಗಳು ಕಂಬಾರರ ಎಲ್ಲಾ ನಾಟಕಗಳಿಗೂ ಅನ್ವಯಿಸುವಂತಿವೆ. ಶೋಷಕ ಸಂಸ್ಕೃತಿಯ ಪ್ರಧಾನ ಲಕ್ಷಣವೆಂದರೆ,ಕೆಲವರಿಗೆ ಪರಮ ಅಧಿಕಾರವನ್ನು ಕೊಟ್ಟರೆ ಅನೇಕರಿಗೆ ಪರಮ ವಿದೇಯತೆನ್ನು ಉಪದೇಶಿಸುತ್ತದೆ. ಊಲಿಗಮಾನ್ಯ ಪದ್ಧತಿಯಲ್ಲಿ ಇದು ಮೌಲ್ಯವ್ಯವಸ್ಥೆಯಾಗಿ ರೂಪುಗೊಂಡಿದೆ. ಮನು ದುಡಿಯುವ ಜನರಿಗೆ ಸಕಲ ಸವಲತ್ತುಗಳಿಂದ ವಿಚಾರಧಾರೆಯನ್ನು ರೂಪಿಸಿದ್ದನ್ನು ಮತ್ತು ಯಾಜ್ಞವಲ್ಕ್ಯ ಮಹಿಳೆಯನ್ನು ಮಿಥ್ಯೆಯೆಂದು ಕರೆದದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇವರಿಬ್ಬರಿಗೂ ಹೆಣ್ಣಿನ ಹಕ್ಕುಗಳ ಬಗ್ಗೆ ಮಾತನಾಡಲಿಲ್ಲ. ಶೋಷಕ ಸಂಸ್ಕೃತಿಯಲ್ಲಿ ಶೂದ್ರರ (ದುಡಿಯುವ ಜನ) ಮತ್ತು ಹೆಣ್ಣು ಸಮಾನರೆಂದು ಪರಿಗಣಿಸಲ್ಪಟ್ಟಿದ್ದಾರೆ.

ಚಂದ್ರಶೇಖರ ಕಂಬಾರರ ಜೋಕುಮಾರ ಸ್ವಾಮಿಯನ್ನು ಭಾರತದಲ್ಲಿನ ಊಳಿಗಮಾನ್ಯ ಅಂಶಗಳ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗುತ್ತದೆ. ಎಪ್ಪತ್ತರ ದಶಕದಲ್ಲಿ ಬಂದ ಈ ನಾಟಕವು ಜಮೀನುದಾರಿ ಪ್ರಭುತ್ವ ಅದರ ಕ್ರೌರ್ಯ ಅಧಿಕಾರ ಕೇಂದ್ರಗಳು ನಿರ್ಮಾಣವಾಗುವ ಬಗ್ಗೆ,ಅಧಿಕಾರದ ಆವಸ್ಥಾಂತರ ನಿಯಂತ್ರಣ ಲೈಂಗಿಕ ರಾಜಕಾರಣ, ಜಮೀನುದಾರಿ ಪದ್ಧತಿಯ ವಿಕೃತಿಗಳಿಗೆ ಪ್ರತಿರೋಧ, ವಿದ್ರೋಹ, ಕಾಮ ಹಾಗೂ ಗಂಡಿನ ಅಧಿಕಾರಿಗಳ ನಡುವೆ ಇರುವ ಸಂಬಂಧ ಇವೇ ಮೊದಲಾದ ವಸ್ತುಗಳನ್ನು ಶೋಧಿಸಲೆತ್ನಿಸುತ್ತದೆ. ಕಂಬಾರರ ನಾಟಕ ಮಂಡಿಸಿರುವ ಊಳಿಗಮಾನ್ಯ ವ್ಯವಸ್ಥೆಯ ದೈನಂದಿನ ರಾಜಕಾರಣದಲ್ಲಿ ಈ ಪ್ರತಿಷ್ಠಿತ ವರ್ಗದ ಶೋಷಣೆ, ದಬ್ಬಾಳಿಕೆ, ಸಾಮಾಜಿಕ ನಿಯಂತ್ರಣಗಳ ಸ್ವರೂಪ ಗೋಚರವಾಗುತ್ತಾ ಹೋಗುತ್ತದೆ. ಅದರ ಜೊತೆಗೆ ಭೂ ಒಡೆಯನ ಟೊಳ್ಳುತಅನ ಹುಳುಕು, ದೌರ್ಬಲ್ಯದ ಚಿತ್ರಣದ ಮೂಲಕ ಕಂಬಾರರು ಊಳಿಗಮಾನ್ಯ ವ್ಯವಸ್ಥೆಯ ಇನ್ನೊಂದು ಮುಖವನ್ನು ತೋರಿಸುತ್ತಾರೆ. ಇದು ಕಂಬಾರರ ಕೃತಿಗಳಲ್ಲಿ ಬರುವ ಈ ಜಮೀನುದಾರಿ ಪದ್ಧತಿಗೆ ಹಾಗೂ ಅದರ ಒಡೆಯನಿಗೆ ಭೂ ಒಡೆತನ, ಅಧಿಕಾರ, ಹಣ ಇವುಗಳ ಬಲ ಇರುತ್ತದೆ.ಆದರೆ ಫಲವತ್ತತೆಯ ಭಾಗ್ಯವಿರುವುದಿಲ್ಲ. ಆದರೂ ಹೆಣ್ಣಿನ ಶೀಲಕ್ಕೆ ಸಂಬಂಧಿಸಿದಂತೆ ಅಥವಾ ಪಾತಿವ್ರತ್ಯಕ್ಕೆ ಸಂಬಂಧಿಸಿದಂತೆ ಹೆಂಡತಿ ಗಂಡನಿಗೆ ಅಧೀನ ಹಾಗೂ ನಿಷ್ಟಳಾಗಿರಬೇಕು ಎಂಬ ನಿಯಮ ಮಾತ್ರ ನಿರಂತರವಾಗಿ ಹೇರಳ್ಪಟ್ಟಿರಬೇಕು. ಅದೇ ರೀತಿ ಗಂಡ ಹೆಂಡತಿಗೆ ನಿಷ್ಟನಾಗಿರಬೇಕು ಎನ್ನುವ ನಿಯಮ ಇಲ್ಲದೇ ಇರುವ ಅಂಶವನ್ನು ಊಳಿಗಮಾನ್ಯ ವ್ಯವಸ್ಥೆಯಲ್ಲಿ ನೋಡಬಹುದು. ಈ ದೃಷ್ಟಿಯಿಂದ ಜೋಕುಮಾರಸ್ವಾಮಿ ನಾಟಕ ಭೂ ಸುಧಾರಣೆಯ ಹಿನ್ನಲೆಯಲ್ಲಿ ಗಂಡು ಹೆಣ್ಣುಗಳ ಸಂಬಂಧ, ಬಂಜೆತನ ಹಾಗೂ ಗೌಡನ ದಬ್ಬಾಳಿಕೆಗಳನ್ನು ಹೇಳುತ್ತದೆ.

ಗೌಡ ಊರಿನ ಶ್ರೀಮಂತ ಹಾಗೂ ಯಜಮಾನ. ಊರಿನ ಜಮೀನೆಲ್ಲವೂ ತನ್ನದೇ ಆಗಬೇಕು ಎಂಬ ಹಟ ಅವನದು. ಆದರೆ ಆತ ಉಳುವುದಿಲ್ಲ. ಆತನಿಗೆ ಊರಿನ ಹೆಣ್ಣುಗಳು ಬೇಕು.ಆದರೆ ಭೋಗಿಸುವ ತಾಕತ್ತು ಇರುವುದಿಲ್ಲ. ಗೌಡನ ಬಳಿ ಬಂದೂಕು ಇದೆ. ಆದರೆ ಗುಂಡು ಹಾರಿಸುವುದಿಲ್ಲ. ಆತನ ಬಂದೂಕು ಆತನ ಅಧಿಕಾರದ ಲಾಂಛನ. ಪುರುಷತ್ವದ ಸಂಕೇತ.ನಾಲ್ಕು ಜನ ಸೇವಕರು ಬಂದೂಕವನ್ನು ಹೊತ್ತು ತರುವುದರ ಮೂಲಕ ಗೌಡನ ರಂಬ ಪ್ರವೇಶ ಆಗುತ್ತದೆ." ಸ್ವಾಮಿ ನಮ್ಮಯ್ ದೇವರೊ ಢಂ ಢಂ ಇವರ ಹೆಸರೊ" ಎಂದು ಆತನ ಭಟ್ಟಂಗಿಗಳು ಆತನ ಹೆಸರು ಮತ್ತು ಮಹಿಮೆಯನ್ನು ಕೊಂಡಾಡುತ್ತಾರೆ.ಢಂ. ಢಂ ಎನ್ನುವುದು ಪೊಳ್ಳು. ಹುರುಳಿಲ್ಲದ್ದು ಆದರೆ ಎಲ್ಲವನ್ನು ಜೀರ್ಣಿಸಿಕೊಳ್ಳುವ ಶಕ್ತಿ ಇದೆ. ಅಧಿಕಾರ, ಕಾಮ, ಊರು, ಭೂಮಿ, ಹೆಣ್ಣು ಅಧಿಕಾರ ಎಲ್ಲವೂ ತನ್ನದಾಗಬೇಕು ಎಂಬ ಆತನ ವ್ಯಕ್ತಿತ್ವದ ರೂಪಗಳು ಎರಡು ಬರೆಯವು. ಒಂದು ಹೊರ ವ್ಯಕ್ತಿತ್ವ, ಎರಡು ಒಳ ವ್ಯಕ್ತಿತ್ವ. ಹೊರಗಿನದು ತೋರಿಕೆಯದು ಒಳಗಿನದು ಹಾಸ್ಯಾಸ್ಪದವಾದುದು. ಏಕೆಂದರೆ ಗೌಡನ ಹೊರಗಿನ ಗತ್ತು, ಲಾಂಛನ, ಆಕಾರ ದರ್ಪ ಅಹಂಕಾರ ಈ ಎಲ್ಲವೂ ದೊಡ್ಡ

ಪುರುಷಾಧಿಕಾರವನ್ನು ತೋರಿಸುತ್ತಿದ್ದರೂ ಆಂತರಿಕವಾಗಿ ಆತ ಟೊಳ್ಳು. ಹೊರಗಡೆ ಬಡಾಯಿ, ಒಳಗಡೆ ದುರ್ಬಲ. ರಾಜಪ್ರಭುತ್ವ ನಕಲಿನ ತುಣುಕಾಗಿ ಗೌಡ ನಾಟಕದಲ್ಲಿ ಕಾಣಬರುತ್ತಾನೆ. ಗೌಡನ ಆಂತರಿಕ ಪೊಳ್ಳುತನ ಇಡೀ ಹಳ್ಳಿಗೆ ತಿಳಿದಿರುತ್ತದೆ.

ಜೋಕುಮಾರ ಸ್ವಾಮಿ ನಾಟಕದ ಕತೆಯ ಅರ್ಧ ಭಾಗದ ವಸ್ತು ಪರುಷತ್ವ ಮತ್ತು ನಪುಂಶಕತ್ವದ ನಡುವಿನ ದ್ವಂದ್ವ, ವೈರುಧ್ಯ ಹಾಗೂ ಘರ್ಷಣೆಯುಳ್ಳದ್ದಾಗಿದೆ. ಊರಿನ ಗೌಡ ಅಧಿಕಾರ ಹಾಗೂ ಹಣದ ಬಲದಿಂದ ಊರಿನಲ್ಲಿ ಕಂಡ ಕಂಡ ಹೆಣ್ಣಿನ ಮೇಲೆ ಕಣ್ಣು ಹಾಕುತ್ತಿರುತ್ತಾನೆ. ಊಳಿಗ ಮಾನ್ಯ ಪ್ರಭುತ್ವದ ದುರ್ಭಲತೆ, ಅಧಿಕಾರ ವಕ್ರತೆ, ಕುರೂಪಗಳನ್ನಲೆಲ್ಲ ವಿಡಂಭಿಸಬಲ್ಲ.ಅಣಕಿಸಬಲ್ಲ ಬೂಡಮೇಲು ಮಾಡಬಲ್ಲ, ಶಕ್ತಿಯನ್ನು ಇಲ್ಲಿಯ ಜನಸಾಮಾನ್ಯರಯ ಪಡೆದಿರುವುದನ್ನು ನಾಟಕಕಾರನ ಕಣ್ಣು ಗುರುತಿಸುತ್ತಾ ಹೋಗುತ್ತದೆ.

ಡಿ.ಆರ್ ನಾಗರಾಜ್ ( ಊರು ಕೇರಿ ಯ ಹಿನ್ನುಡಿಯಲ್ಲಿ) ಹೇಳುವಂತೆ ಇದು ಬಡವರ ನಗುವಿನ ಶಕ್ತಿಯ ರೂಪಕದಂತೆಯೂ ಕಾಣುತ್ತದೆ. ಇದು ಕೆಳ ಜಾತಿಗಳು ಒಡೆಯನಿಗೆ, ಅಥವಾ ಆಳಿಸಿಕೊಳ್ಳುವವರು, ಆಳುವವರಿಗೆ ತೋರುವ ಪ್ರತಿಭಟನೆಯ ಪ್ರತೀಕವಾಗಿದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಕೆಳಸ್ತರದಲ್ಲಿರುವ ಜಾತಿ ಸ್ವಾತಂತ್ರ್ಯೋತ್ತರ ಭಾರತದ ವಿಶಿಷ್ಟ ಸಾಮಾಜಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಗಳಿಸಿಕೊಳ್ಳತೊಡಗಿದ ಹೊಸದನಿಯ ಕತೆಯನ್ನು ಇದು ಹೇಳುತ್ತದೆ. ಗೌಡನನ್ನು ಛೇಡಿಸಿ ನಿಲ್ಲುವ ಹೊಸ ಎಚ್ಚರ, ಧೈರ್ಯ, ದಿಟ್ಟತನ, ಸಾಹಸ ಮೊದಲಾದ ಪ್ರಗತಿಪರ ಧೋರಣೆಗಳನ್ನು ಜಾತಿ ಪದ್ಧತಿಯಲ್ಲಿ ಕೆಳಸ್ತರಗಳು ಗಳಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆರಂಭಗೊಂಡು ಬೆಳೆದ ಚಳುವಳಿ ರಾಜಕಾರಣ, ಹಾಗೂ ಅಧಿಕಾರ ರಾಜಕಾರಣದ ಸಂದರ್ಭದಲ್ಲಿ ಎತ್ತಿದ ಪ್ರಶ್ನೆಗಳು ಬೇರೆ ಬೇರೆ ರೀತಿಯಲ್ಲಿ ಸಮೀಕರಣಗೊಂಡು ವಿವಿಧ ಜನವರ್ಗಗಳನ್ನು ತಲುಪುತ್ತಿರುವ ಕ್ರಮವನ್ನೂ ಗುರ್ಯಾ- ನಿಂಗಿಯರ ಹೊಸ ದನಿಗಳು ಸೂಚಿಸುತ್ತವೆ. ಹೊಸ ರಾಜಕಾರಣದ ಹಿನ್ನೆಲೆಯಲ್ಲಿ ಹೊಸ ವ್ಯಕ್ತಿತ್ವಗಳ ಉದಯದ ಮುನ್ಸೂಚನೆಯನ್ನು ಈ ಪಾತ್ರಗಳು ನೀಡುತ್ತವೆ.

ಈ ನಾಟಕವು ಊಳಿಗಮಾನ್ಯ ಪ್ರಭುತ್ವ ಮತ್ತು ಬಲಿಗಳ ನಡುವಣ ಸಂಬಂಧವನ್ನು ಶೋಧಿಸುತ್ತದೆ. ಉಳಿಗೆ ಮಾನ್ಯ ಪದ್ಧತಿಯಲ್ಲಿ ಭೂಮಿ ಹಾಗೂ ಅದಕ್ಕೆ ಸಂಬಂಧಿಸಿದ ಉತ್ಪಾದನಾ ಸಾಧನಗಳ ನಿಯಂತ್ರಣಕನೂ ಗೌಡನೇ ಆಗಿದ್ದ. ಹಾಗೇಯೇ ಜೈವಿಕ ಸೃಷ್ಟಿಶೀಲತೆ ವಿರೋಧಿಯೂ ಆಗಿದ್ದ. ಆತ ಮತ್ತು ಆತನ ಸೇವಕರು ಬಸಣ್ಣನ ಮೇಲೆ ಆಕ್ರಮಣ ಮಾಡಿ ಕೊಳ್ಳುತ್ತಾರೆ. ಅಧಿಕಾರ ಕಾಮ ಮತ್ತು ಅದರ ಹಿಂಸೆಗಳ ಸೆಳೆತದಲ್ಲಿ ವ್ಯಕ್ತಿಗಳು. ಸಫಲಕಾಮ ಲಿಂಗ ಸಂಬಂಧಗಳು, ಜೈವಿಕತೆ ಇವುಗಳು ನಾಶವಾಗುವ ಬಗೆಯನ್ನು ಇಲ್ಲಿ ನೋಡಬಹುದು. ಜೋಕುಮಾರ ಸ್ವಾಮಿ ನಾಟಕದ ಕೊನೆಯಲ್ಲಿ ಗೌಡನ ಕಡೆಯ ನೂರಾರು ಪುಂಡರು ಸೃಷ್ಟಿಶೀಲತೆಯ ಸಂಕೇತವಾದ ಜೋಕುಮಾರಸ್ವಾಮಿಯ ಪ್ರತಿಕವಾಗಿದ್ದ ಬಸಣ್ಣನನ್ನು ಕೊಚ್ಚಿ ಹಾಕುತ್ತಾರೆ. ಉತ್ಕಟವಾದ ಕಾಮ ಉತ್ಕಟವಾದ ಹಿಂಸೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ದುರ್ಬಲಗೊಂಡಿದ್ದ ಊರ ಗೌಡ, ಸಫಲ ಕಾಮದ ಪ್ರಭುತ್ವವನ್ನು ಮುರಿದು ತನ್ನ ಅಧಿಕಾರ ಕಾಮ ಮತ್ತು ಕ್ರೌರ್ಯದ ಯಜಮಾನಿಕೆಯನ್ನು ಪುನಃ ಸ್ಥಾಪಿಸಿಬಿಡುತ್ತಾನೆ.

ಇಂದು ಹಳ್ಳಿಗಳು ಉಳಿಗಮಾನ್ಯ ವ್ಯವಸ್ಥೆಯನ್ನು ಉಳಿಸಿಕೊಂಡು ಬರುತ್ತಿದ್ದರೂ, ಪ್ರಜಾಪ್ರಭುತ್ವದ ಪರಿಣಾಮದಿಂದಾಗಿ ವಸ್ತುಸ್ಥಿತಿಯ ಪಲ್ಲಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ನಾಟಕದ ಹಳ್ಳಿ ಊಳಿಗಮಾನ್ಯ ವ್ಯವಸ್ಥೆಯನ್ನು ನಿವಾರಿಸಿಕೊಳ್ಳಲೆತ್ನಿಸುವ ಬಹುಜನ ಸಮಾಜದ ತುಡಿತವನ್ನು ದಾಖಲಿಸುತ್ತದೆ. ಇಂಥ ಸಂದರ್ಭದಲ್ಲಿ ಎದುರಾಗುವ ಅಮಾನವೀಯ ಕ್ರೌರ್ಯದ ಚಿತ್ರಣವನ್ನೂ ನಾಟಕದ ಕೊನೆಯಲ್ಲಿ ಕಾಣಬಹುದಾಗಿದೆ.ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದಾದ ಮೇಲೂ ಊಳಿಗ ಮಾನ್ಯ ವ್ಯವಸ್ಥೆ ಗ್ರಾಮೀಣ ಪ್ರದೇಶದಲ್ಲಿ ಹೆಪ್ಪುಗಟ್ಟಿಕೊಂಡೇ ಇದೆ ಎಂಬುದರ

ಸೂಚಕವಾಗಿ ನಾಟಕದ ಕೊನೆಯಲ್ಲಿ ಬಸಣ್ಣನ ಕೊಲೆಯ ಮೂಲಕ ಕ್ರೌರ್ಯ ಮೈದಾಳುತ್ತದೆ.ಜಮೀನುದಾರಿ ಯಜಮಾನಿಕೆ ದುರ್ಬಲಗೊಳ್ಳುತ್ತಿರುವ ತಳಮಳ ಒಂದು ಕಡೆ ಇದೆ. ಇದರ ವಿರುದ್ಧ ಪ್ರಬಲವಾದ ಹೊಸಶಕ್ತಿ ಎದ್ದು ಬರುವ ಬಿರುಸು ಮತ್ತೊಂದು ಕಡೆ ಇದೆ. ಈ ಸಂಕ್ರಮಣಾವಸ್ಥೆಯಲ್ಲಿ ಜನತಂತ್ರಾವಾದಿ ಶಕ್ತಿಗೆ ವಿರುದ್ಧವಾಗಿ ಊಳಿಗಮಾನ್ಯವೇ ಪ್ರಾಬಲ್ಯವನ್ನು ಸಾಧಿಸುತ್ತದೆ. ಕಡೆಗೆ ಬಸಣ್ಣನಿಗೆ ಸಹಾಯ ಮಾಡಲೆಂದೇ ಬಂದ ಗುರ್ಯಾ, ತನ್ನ ತಲೆ ಮೇಲಿನ ರುಮಾಲನ್ನು ಬಸಣ್ಣನ ಹೆಣಕ್ಕೆ ಹೊದಿಸಿ, ಬಸಣ್ಣಾ ಹಿಡಿದ ಕುಡುಗೋಲನ್ನು ನಿರ್ಧಾರದಿಂದ ಕೈಗೆತ್ತಿಕೊಳ್ಳುತ್ತಾನೆ. ಇದು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ದಿಟ್ಟತನದಿಂದ ಎದ್ದು ನಿಲ್ಲಬೇಕಾದುದು ದಲಿತಶಕ್ತಿ ಎಂಬುದನ್ನೂ ಸೂಚಿಸುತ್ತದೆ. ಜಾತಿ, ವರ್ಗ, ವರ್ಣ, ಲಿಂಗಭೇದ, ಲೈಂಗಿಕ ಕಿರುಕುಳ, ದಲಿತ ಶೋಷಣೆ ಇವುಗಳ ವಿರುದ್ಧ ಹೋರಾಟ ಮಾಡಬೇಕಾಗಿರುವ ದಲಿತ ಚಳುವಳಿಯ ಕ್ರಾಂತಿಕಾರಕ ಹೋರಾಟದ ಅನಿವಾರ್ಯತೆಯನ್ನು ಗುರ್ಯಾನ ಪ್ರತಿಕ್ರಿಯೆಲ್ಲಿ ಕಾಣಬಹುದಾಗಿದೆ. ಈ ಕುಡುಗೋಲು ಕಮ್ಯೂನಿಸಮ್ಮಿನ ಸಂಕೇತವೂ ಹೌದು. ಹೋರಾಟದ ಸಂಕೇತ, ರೈತಾಪಿವರ್ಗದ ಸಂಕೇತ, ಹಸಿರುಕ್ರಾಂತಿಯ ಸಂಕೇತ, ಹೀಗೆ ಹಲವು ಅರ್ಥಗಳನ್ನು ಕುಡುಗೋಲಿನ ಪ್ರತಿಮೆ ಸೂಚಿಸುತ್ತದೆ. ಬಸಣ್ಣನ ಸಾವಿನ ಜೊತೆಗೇ ಭವಿಷ್ಯದ ಒಳಿತುಗಳ ಕಾಣ್ಕೆಯು ಇದೆ.

ನಾಟಕದ ಕೊನೆಗೆ ಊರಿನ ಕ್ರಾಂತಿಕಾರಿ ವ್ಯಕ್ತಿಯಾದ ಬಸಣ್ಣನ ಪ್ರೇರಕ ಶಕ್ತಿಯಿಂದ ಗುರ್ಯಾ ವ್ಯವಸ್ಥೆಯ ಸ್ಫೋಟಕ ಶಕ್ತಿಯಾಗಿ ಪ್ರಭುತ್ವಕ್ಕೆ ಸವಾಲಾಗಿ ನಿಲ್ಲುತ್ತಾನೆ. ಆದರೂ ವಾಸ್ತವಿಕವಾಗಿ ಊಳಿಗಮಾನ್ಯವೆಂಬ ಕ್ರೂರ ವ್ಯವಸ್ಥೆ ಗಂಡು- ಹೆಣ್ಣುಗಳ ನಡುವಿನ ಸಂಬಂಧವನ್ನು ಸಾಂಸ್ಕೃತಿಕ ಒಳಜಗತ್ತಿನ ಮೇಲೆ ದಾಳಿ ಮಾಡುವ, ಧ್ವಂಸಗೊಳಿಸುವ ಕ್ರಿಯೆಯನ್ನು ಈ ನಾಟಕ ಅನಾವರಣಗೊಳಿಸುತ್ತದೆ.ಹಣ, ಸಂಪತ್ತು, ಭೂಮಿ, ಹೆಣ್ಣು ಅಧಿಕಾರ, ಆರ್ಥಿಕ ಪ್ರಭುತ್ವ ಮೊದಲಾದ ಭೌತಿಕ ಅಧಿಕಾರ ಕೇಂದ್ರಗಳೆಲ್ಲವೂ ಊಳಿಗಮಾನ್ಯ ವ್ಯವಸ್ಥೆಯ ಉಪಭೋಗಗಳು ಎನ್ನುವುದನ್ನು ಈ ನಾಟಕ ಸೂಚಿಸುತ್ತದೆ.

ಕೊನೆ ಟಿಪ್ಪಣಿಗಳು

1. ರಂಗಸ್ವಾಮಿ, ಭಾರತೀಯ ಸಮಾಜಶಾಸ್ತ್ರ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೨೨ ( ಸಂಗ್ರಹರೂಪ)
2. ಶಂಕರರಾವ್ ಚ.ನ. ಸಮಾಜಶಾಸ್ತ್ರದ ಕಿರು ವಿಶ್ವಕೋಶ,ಜೈಭಾರತ್ ಪ್ರಕಾಶನ, ಮಂಗಳೂರು, ೨೦೦೧, ಪ.೨೭೮
3. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩, ಪ.೪೯
4. ಶ್ರೀ ಕುಮಾರನ್ ನಾಯಕ್ ಲೇಖನ ೧೯೮೧
5. ಎಂ.ವಿ. ಶ್ರೀನಿವಅಸ ಮತ್ತು ಲಕ್ಷ್ಮಣ್ ತೆಲಗಾವಿ – ಇತಿಹಾಸ ಲೇಖನಗಳು
6. ಡಿ.ಡಿ ಕೋಶಂಬಿ, ಆರ್ ಎಸ್ ಶರ್ಮ, ಕೆ.ಎಸ್ ಶಿವಣ್ಣ, ಎಂ.ಎಂ. ಕಲಬುರ್ಗಿ – ಲೇಖನಗಳು
7. ಸ್ವಡಿ ಆಫ್ ಇಂಡಿಯನ್ ಇಸ್ಟರಿ ,ಡಿ.ಡಿ. ಕೋಶಂಬಿ, ಪು. ೨೭೫-೨೭೬
8. ಚರಿತ್ರೆ, ಸಂಪುಟ :೧,ಲಕ್ಷ್ಮಣ್ ತೆಲಗಾವಿ ಪು. ೧೦೯
9. ಚರಿತ್ರೆ, ಸಂಪುಟ :೧,ಲಕ್ಷ್ಮಣ್ ತೆಲಗಾವಿ ಪು. ೧೦೫
10. ಷೇಕ್ ಅಲಿ, ಕೆ. ಎಸ್ ಪುಟ್ಟಣ್ಣ ,ಕರ್ನಾಟಕ ಚರಿತ್ರೆ,ಸಂಪುಟ ೩, ಪು ೨೬೪
11. ಚಂದ್ರಶೇಖರ ಕಂಬಾರ, ಜೋಕುಮಾರ ಸ್ವಾಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫ ಪು.೨೫
12. ನಾಗರಾಜ. ಡಿ.ಆರ್. ಸಾಹಿತ್ಯ ಕಥನ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ಪು. ೨೪
13. ಜೋಕುಮಾರ ಸ್ವಾಮಿ, ಪು.೧೫
14. ಜೋಕುಮಾರ ಸ್ವಾಮಿ, ಪು.೪೨
15. ಅದೇ ಪುಟ

16. ರಾಮಚಂದ್ರನ್ ಸಿ.ಎನ್, ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೨೦೦೨, ಪು, ೩೮-೩೯

17. ಜೋಕುಮಾರ ಸ್ವಾಮಿ, ಪು.೭೦